# ಕರ್ನಾಟಕ ಸರ್ಕಾರ

ಸಂಖ್ಯೆ: ಆಇ(ವಿಶೇಷ)/101/ಪಿಇಎನ್/2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 08-12-2018.

## ಸುತ್ತೋಲೆ.

ವಿಷಯ: ಪಿಂಚಣಿ ಪ್ರಕರಣಗಳನ್ನು ನಿಗದಿತ ಕಾಲಾವಧಿಯೊಳಗೆ ಚುರುಕಾಗಿ ಮತ್ತು ತ್ವರಿತವಾಗಿ ಇತ್ಯರ್ಥಗೊಳಿಸುವ ಬಗ್ಗೆ.

***

1. ಸರ್ಕಾರಿ ನೌಕರನು ಚಾಲ್ತಿಯಲ್ಲಿರುವ ನಿವೃತ್ತಿ ವೇತನ ಪಾವತಿ ಆದೇಶ (Pension Payment Order) ಇಲ್ಲದೆ ವಯೋನಿವೃತ್ತಿ ಹೊಂದಬಾರದೆಂಬುದು ಸರ್ಕಾರದ ಘೋಷಿತ ನೀತಿಯಾಗಿದೆ.

2. ಆದಾಗ್ಯೂ, ಸರ್ಕಾರಿ ನೌಕರರ ಮತ್ತು ಅಧಿಕಾರಿಗಳ ನಿವೃತ್ತಿ ವೇತನ ಪ್ರಕರಣಗಳನ್ನು ನಿಗಧಿತ ಕಾಲಾವಧಿಯೊಳಗೆ ಇತ್ಯರ್ಥಗೊಳಿಸದೆ ತೀರಾ ವಿಳಂಬ ಮಾಡಲಾಗುತ್ತಿದೆ ಎಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿವೆ. ನಿಗಧಿತ ಕಾಲಾವಧಿಯೊಳಗೆ ಮಹಾಲೇಖಪಾಲರಿಗೆ ಕಳುಹಿಸುವ ಮಹತ್ವವನ್ನು ತಿಳಿಯದಿರುವುದು ಎದ್ದು ಕಾಣುತ್ತದೆ. ಆದುದರಿಂದ, ಸದರಿ ಸೂಚನೆಗಳನ್ನು ಮತ್ತೊಮ್ಮೆ ಒತ್ತಿಹೇಳುವ ಅವಶ್ಯಕತೆ ಇದೆಯೆಂದು ಸರ್ಕಾರವು ಮನಗಂಡಿದೆ.

3. ಆದಕಾರಣ, ಇನ್ನು ಮುಂದೆ ವಯೋನಿವೃತ್ತಿ ಹೊಂದಲಿರುವ ಸರ್ಕಾರಿ ನೌಕರರ ನಿವೃತ್ತಿ ವೇತನ ದಾಖಲೆಗಳನ್ನು 12 ತಿಂಗಳು ಮುಂಚಿತವಾಗಿ (ಪ್ರಸ್ತುತ ಅನುಸರಿಸುತ್ತಿರುವ 6 ತಿಂಗಳ ಅವಧಿಯ ರೂಢಿಗತ ಪದ್ಧತಿಯನ್ನು ಮಾರ್ಪಡಿಸಿ) ತಯಾರಿಸಲು ಪ್ರಾರಂಭಿಸಿ, ಹಾಗೆ ತಯಾರಿಸಿದ ಸಂಪೂರ್ಣ ದಾಖಲೆಗಳನ್ನು ವಯೋ ನಿವೃತ್ತಿಗೆ ಕನಿಷ್ಠ 03 ತಿಂಗಳ ಮುಂಚಿತವಾಗಿ ಮಹಾಲೇಖಪಾಲರಿಗೆ ಕಡ್ಡಾಯವಾಗಿ ಕಳುಹಿಸುವ ಮತ್ತು ವಯೋನಿವೃತ್ತಿ ಹೊಂದಲಿರುವ ಪತ್ರಾಂಕಿತ ಸರ್ಕಾರಿ ಅಧಿಕಾರಿಗಳ ಸಂಬಂಧದಲ್ಲಿ ನಮೂನೆ 7-ಎ ರಲ್ಲಿ ಅವಶ್ಯಕ ಮಾಹಿತಿಯನ್ನು, ಮಂಜೂರಾತಿಯೊಂದಿಗೆ, ವಯೋನಿವೃತ್ತಿಯ ದಿನಾಂಕಕ್ಕೆ ಒಂದು ತಿಂಗಳ ಮುಂಚಿತವಾಗಿ ಮಹಾಲೇಖಪಾಲರಿಗೆ ಕಡ್ಡಾಯವಾಗಿ ಕಳುಹಿಸುವ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದೆಂದು ಈ ಮೂಲಕ ಸೂಚಿಸಲಾಗಿದೆ.

4. ಮೇಲಿನ ಸೂಚನೆಗಳನ್ನು ಕಛೇರಿ ಮುಖ್ಯಸ್ಥರ ಗಮನಕ್ಕೆ ತಕ್ಷಣವೇ ತರುತ್ತಾ, ಅವುಗಳನ್ನು ಚಾಚುತಪ್ಪದೆ ಪಾಲಿಸುವಂತೆ ನಿರ್ದೇಶನ ನೀಡಲು ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳನ್ನು ಮತ್ತು ಇಲಾಖಾ ಮುಖ್ಯಸ್ಥರನ್ನು ಕೋರಲಾಗಿದೆ.

5. ನಿವೃತ್ತಿ ವೇತನವನ್ನು ತಡವಾಗಿ ಪಾವತಿಸಿದಲ್ಲಿ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ. ಹಾಗೆ ಪಾವತಿಸಬೇಕಾದ ಬಡ್ಡಿಯನ್ನು ವಿಳಂಬಕ್ಕೆ ಕಾರಣರಾದಂತಹ ನಿವೃತ್ತಿ ವೇತನ ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರದಿಂದ ಅಥವಾ ಸಂಬಂಧಪಟ್ಟ ನೌಕರರಿಂದ ವಸೂಲಿ ಮಾಡಬೇಕಾಗುತ್ತದೆ. ಅಲ್ಲದೆ, ಅಂತಹ ವಿಳಂಬಕ್ಕೆ ಕಾರಣರಾದಂತಹ ಅಧಿಕಾರಿ ಮತ್ತು ನೌಕರರು ಶಿಸ್ತು ಕ್ರಮಕ್ಕೂ ಬದ್ಧರಾಗುತ್ತಾರೆಂಬ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕದೆಂದು ಒತ್ತಿ ಹೇಳಲಾಗಿದೆ.

(ತ.ಮ. ವಿಜಯ್ ಭಾಸ್ಕರ್)
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಯಥಾಪ್ರತಿ**

ಕರ್ನಾಟಕ ಸರ್ಕಾರ

ಸಂಖ್ಯೆ: 4534/ಪಪೂಶಿಇ/3/ಆಡಳಿತ-1/ವಿನಿ-1/ಇತರೆ/2018-19

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ,
ಮಲ್ಲೇಶ್ವರಂ, ಬೆಂಗಳೂರು-12
ದಿನಾಂಕ : -03-2019

**ಸುತ್ತೋಲೆ**

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಸುತ್ತೋಲೆ ಸಂಖ್ಯೆ : ಆಇ(ವಿಶೇಷ)/101/ಪಿಇಎನ್/2018, ದಿನಾಂಕ : 08-12-2018ರ ಯಥಾಪ್ರತಿಯನ್ನು ಇದರೊಂದಿಗೆ ಅನುಬಂಧಿಸಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಸರ್ಕಾರಿ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ಸರ್ಕಾರದ ಮಾನ್ಯ ಮುಖ್ಯ ಕಾರ್ಯದರ್ಶಿಯವರು ಪಿಂಚಣಿ ಪ್ರಕರಣಗಳನ್ನು ನಿಗಧಿತ ಕಾಲಾವಧಿಯೊಳಗೆ ತ್ವರಿತವಾಗಿ ಇತ್ಯರ್ಥ ಪಡಿಸಲು ನಿರ್ದೇಶಿಸಿ ದಿನಾಂಕ : 08-12-2018ರಲ್ಲಿ ಹೊರಡಿಸಿರುವ ಸುತ್ತೋಲೆಯಲ್ಲಿನ ಸೂಚನೆಗಳನ್ನು ಚಾಚು ತಪ್ಪದೇ ಪಾಲಿಸಿ ಅದರಂತೆ ಕ್ರಮವಹಿಸಲು ಈ ಮೂಲಕ ಸೂಚಿಸಿದೆ.

ಮುಂದುವರೆದು, ತಮ್ಮ ಹಂತದಲ್ಲಿ, ಅಧೀನ ಕಛೇರಿಗಳಲ್ಲಿ ಪಿಂಚಣಿ ಬಾಕಿ ಪ್ರಕರಣಗಳು ಇದ್ದಲ್ಲಿ ತ್ವರಿತವಾಗಿ ಇತ್ಯರ್ಥಪಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಈ ಮೂಲಕ ಸೂಚಿಸಿದೆ. ಭವಿಷ್ಯದಲ್ಲಿ ಪಿಂಚಣಿ ಪ್ರಕರಣಗಳು ಬಾಕಿ ಉಳಿದಿರುವುದು ಕಂಡುಬಂದಲ್ಲಿ, ಸಂಬಂಧಿಸಿದವರ ವಿರುದ್ಧ ನಿಯಮಾನುಸಾರ ಸೂಕ್ತ ಶಿಸ್ತುಕ್ರಮ ಜರುಗಿಸಲಾಗುವುದೆಂದು ತಿಳಿಯಪಡಿಸಿದೆ.

ಮಾನ್ಯ ನಿರ್ದೇಶಕರವರ ಆದೇಶದ ಮೇರೆಗೆ

20/3/19.

ಜಂಟಿ ನಿರ್ದೇಶಕರು (ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ,

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ– ಅಗತ್ಯಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ– ಜಿಲ್ಲಾ ಉಪನಿರ್ದೇಶಕರ ಮೂಲಕ
3. ಶಾಖಾಧಿಕಾರಿಗಳು, ಇ–ಆಡಳಿತ ವಿಭಾಗ– ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು.

ಪ್ರತಿಗಳು :

1. ಮಾನ್ಯ ನಿರ್ದೇಶಕರ ಆಪ್ತ ಶಾಖೆಗೆ.
2. ನಿರ್ದೇಶಕರು (ಪರೀಕ್ಷೆಗಳು) ಇವರ ಆಪ್ತ ಶಾಖೆಗೆ.
3. ಜಂಟಿ ನಿರ್ದೇಶಕರು (ಆಡಳಿತ/ಮಾನ್ಯತೆ ಮತ್ತು ಅನುದಾನ/ಪರೀಕ್ಷೆ/ಮೂಲಭೂತ ಸೌಕರ್ಯ/ಶೈಕ್ಷಣಿಕ) ಇವರ ಆಪ್ತ ಶಾಖೆಗೆ.
4. ಉಪ ನಿರ್ದೇಶಕರು (ಆಡಳಿತ/ಮಾನ್ಯತೆ ಮತ್ತು ಅನುದಾನ/ಪರೀಕ್ಷೆ/ಮೂಲಭೂತ ಸೌಕರ್ಯ/ಶೈಕ್ಷಣಿಕ)
5. ಕಛೇರಿ ಪ್ರತಿ.